## ಆನ್‌ಲೈನ್ ಅರ್ಜಿಯನ್ನು ಭರ್ತಿಮಾಡಲು ನೀಡಿರುವ ಸೂಚನೆಗಳು :

**ಸಾಮಾನ್ಯ ಸೂಚನೆಗಳು :**

- ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಮುನ್ನ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು.
- ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳು–2019 : ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ (ಸ್ನಾತಕ ಪದವಿಗೆ ಲ್ಯಾಟರಲ್ ಎಂಟ್ರಿ ಕಾರ್ಯಕ್ರಮಗಳು) ಬಿ.ಎಸ್ಸಿ.(ಆನರ್ಸ್) ಕೃಷಿ/ಬಿ.ಎಸ್ಸಿ.(ಆನರ್ಸ್) ತೋಟಗಾರಿಕೆ/ಬಿ.ಟೆಕ್.(ಕೃಷಿ ಇಂಜಿನಿಯರಿಂಗ್), ಬಿ.ಎಸ್ಸಿ.(ಆನರ್ಸ್) ಅರಣ್ಯ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದು.
- ಅಭ್ಯರ್ಥಿಗಳು ಮಾಹಿತಿ ಪುಸ್ತಕ ಮತ್ತು ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು

## ದಿನಾಂಕ ಮತ್ತು ವಿವರಗಳು :

| ವಿವರಗಳು | ದಿನಾಂಕ |
|---|---|
| ಆನ್‌ಲೈನ್ ಅರ್ಜಿಯನ್ನು ಭರ್ತಿಮಾಡಲು ಆರಂಭ | 17–06–2019 |
| ಆನ್‌ಲೈನ್ ಅರ್ಜಿಯನ್ನು ಭರ್ತಿಮಾಡಲು ಕೊನೆಯ ದಿನಾಂಕ | 18–07–2019 |
| ಅರ್ಜಿ ಶುಲ್ಕ ಪಾವತಿಯ ಕೊನೆಯ ದಿನಾಂಕ | 18–07–2019 |
| ಪ್ರವೇಶಾತಿ/ಹಾಲ್‌ಟಿಕೆಟ್ ಡೌನ್‌ಲೋಡ್ ಮಾಡಿಕೊಳ್ಳುವುದು | 19–07–2019 |

**ಅಭ್ಯರ್ಥಿಗಳು ಅಪ್‌ಲೋಡ್ ಮಾಡಬೇಕಾದ ದಾಖಲಾತಿಗಳು :**

- ಅಭ್ಯರ್ಥಿಗಳ ಭಾವಚಿತ್ರ(ಫೋಟೋ), ಸಹಿ, ಎಡ ಹೆಬ್ಬೆಟ್ಟಿನ ಗುರುತು ಮತ್ತು ತಂದೆಯ/ತಾಯಿಯ/ಪೋಷಕರ ಸಹಿ ಇವೆಲ್ಲವೂ ಜೆಪಿಇಜಿ ಫಾರ್ಮ್ಯಾಟ್‌ನಲ್ಲಿರಬೇಕು ಹಾಗೂ ಪ್ರತಿಯೊಂದು 40 ಕೆಬಿ ಗಿಂತ ಹೆಚ್ಚಿರಬಾರದು.
- ಭಾವಚಿತ್ರ ಗಾತ್ರ ಅಗಲ 3.5 ಸೆಂ.ಮೀ. ಹಾಗೂ ಎತ್ತರ 4.5 ಸೆಂ.ಮೀ. ಇರಬೇಕು.
- ಸಹಿ ಮತ್ತು ಎಡ ಹೆಬ್ಬೆಟ್ಟಿನ ಗುರುತಿನ ಗಾತ್ರವು ಅಗಲ 3.5 ಸೆಂ.ಮೀ. ಹಾಗೂ ಎತ್ತರ 1.5 ಸೆಂ.ಮೀ. ಇರಬೇಕು.
- ಎಲ್ಲಾ ದಾಖಲಾತಿಗಳು ಪಿಡಿಎಫ್ ಫಾರ್ಮ್ಯಾಟ್‌ನಲ್ಲಿರಬೇಕು ಹಾಗೂ ಅದರ ಗಾತ್ರವು 400 ಕೆಬಿಗಿಂತ(ಸ್ಕ್ಯಾನ್‌ನ ಗುಣಮಟ್ಟ 200ರಿಂದ 300 ಡಿಪಿಐ ಇರಬೇಕು) ಹೆಚ್ಚಿರಬಾರದು.
- ಅಭ್ಯರ್ಥಿಗಳು ಸಲ್ಲಿಸುವ ಅರ್ಜಿಯಲ್ಲಿ ಬ್ಲರ್/ಸೂಕ್ತವಲ್ಲದ ಚಿತ್ರಗಳನ್ನು ಹಾಗೂ ದಾಖಲಾತಿಗಳನ್ನು ತಿರಸ್ಕರಿಸಲಾಗುವುದು.

**ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಹಂತಗಳು :**

- ಮಾಹಿತಿ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಳ್ಳಿ ಮತ್ತು ಜಾಗ್ರತೆಯಾಗಿ ಓದಿಕೊಳ್ಳುವುದು.
- ಮಾದರಿಯ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಿ.
- ಆನ್‌ಲೈನ್ ಅರ್ಜಿಯನ್ನು ತುಂಬಿರಿ.
- ಅಭ್ಯರ್ಥಿಗಳು ಭಾವಚಿತ್ರ, ಸಹಿ ಮತ್ತು ಎಡ ಹೆಬ್ಬೆಟ್ಟಿನ ಗುರುತು ಹಾಗೂ ಸ್ವಯಂ ಘೋಷಣೆಯನ್ನು ಅಪ್‌ಲೋಡ್ ಮಾಡುವುದು.
- ಅಪ್‌ಲೋಡ್ ಮಾಡಿದ ಅರ್ಜಿಯನ್ನು ಮುಂಚಿತವಾಗಿ ನೋಡುವುದು ಮತ್ತು ಅಂತಿಮವಾಗಿ ಸಲ್ಲಿಸುವುದು
- ಅಂತಿಮಗೊಂಡ ಅರ್ಜಿಯನ್ನು ಮುದ್ರಣ ಮಾಡಿಕೊಳ್ಳುವುದು.

**ಸೂಚನೆಗಳು :**

1. ಕೃಷಿ ವಿಶ್ವವಿದ್ಯಾಲಯಗಳು ಎಸ್‌ಎಂಎಸ್ ಅಥವಾ ಇ–ಮೇಲ್ ಮೂಲಕ ತಿಳಿಸುತ್ತವೆ. ಅರ್ಜಿಯನ್ನು ಸಲ್ಲಿಸುವ ಮುನ್ನ ನಿಮ್ಮ ಮೊಬೈಲ್ ಸಂಖ್ಯೆ ಹಾಗೂ ಇ–ಮೇಲ್‌ಗಳನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಕೃಷಿ ವಿಶ್ವವಿದ್ಯಾಲಯಗಳಿಗೆ ಅಭ್ಯರ್ಥಿಗಳು ಸಂಪರ್ಕಿಸಲು ನೀಡಿರುವ ಮಾಹಿತಿಯು ತಪ್ಪಾಗಿದ್ದಲ್ಲಿ  ಕೃಷಿ ವಿಶ್ವವಿದ್ಯಾಲಯಗಳು ಜವಾಬ್ದಾರರಾಗಿರುವುದಿಲ್ಲ.

2. ಅಭ್ಯರ್ಥಿಗಳು ತಮ್ಮ ಪಾಸ್‌ವರ್ಡ್(ಕನಿಷ್ಠ 8 ಮತ್ತು ಗರಿಷ್ಠ 14 ಅಕ್ಷರಗಳಲ್ಲಿ)ಅನ್ನು ಒಂದು ದೊಡ್ಡ ಅಕ್ಷರ, ಒಂದು ಅಂಕಿ ಹಾಗೂ ಒಂದು ವಿಶೇಷ ಚಿಹ್ನೆ(:,!,@,#,$,%, ^,&,* ರಂತೆ) ಒಳಗೊಂಡಿರಬೇಕು.

3. * ಚಿಹ್ನೆಯನ್ನು ಎಲ್ಲೆಡೆ ಅರ್ಜಿಯಲ್ಲಿ ಕಡ್ಡಾಯವಾಗಿ ಬಳಸುವುದು.

4. ಅಭ್ಯರ್ಥಿಗಳು ನಿಮ್ಮ ಯೂಸರ್ ಐಡಿ, ಪಾಸ್‌ವರ್ಡ್, ಗುಪ್ತ ಪ್ರಶ್ನೆ ಮತ್ತು ಉತ್ತರವನ್ನು ನೆನಪಿಟ್ಟುಕೊಳ್ಳಿ.